ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 13th December 1972

The house met in the Assembly Chamber, Vidhana Soudha, at One of the Clock.

MADAM SPEAKER (SMT. K. S. Nagarathnamma) in the Chair.

STARRED QUESTIONS

(to which oral answers were given)

INCREASING OF AGRICULTURAL PRODUCTION

131. SRI M. H. JAYAPRAKASH NARAYAN (Sirsi):—

Will the Minister for Agriculture and Forests be pleased to state:-

(*a*) whether research work is going on in 23 centres of India regarding increasing of agricultural production by retention of moisture in the dry land;

(*b*) whether this experiment is going on at Bangalore, Bellary and Bijapur centres of Mysore State;

(*c*) whether it is a fact that this experiment has revealed that jowar production can be increased by five fold;

(*d*) the amount sanctioned by Central and State Government for conducting experiments regarding development of agriculture in dry land;

(*e*) the steps taken by State Government to utilise the result of this experiment in greater extent for the benefit of ryots?

SRI S. M. KRISHNA (Minister for Industries) on behalf of

[SRI K. H. PATIL (Minister for Agriculture and Forests)—]

(*a*) In addition to 15 centres, the Central Government have sanctioned a special centre at Delhi on Dry Farming Research. Research work is going on in these centres.

(*b*) Yes. Two main research centres, one at Hebbal another at Bellary and one sub-centre at Bijapur have been sanctioned in Mysore State. Research work is going on in these centres In addition. three dry forming (consolidated dry farming) development schemes have been sanctioned in the following three districts:—

(i) Dodballapur (Bangalore District)

(ii) Bijapur (Bijapur District)

(iii) Hadagali (Bellary District)

(*c*) The results of the experiments indicate that the yield of rabi jowar can be increased by two to three times in case of local jowar and 3—4 times in case of Hybrid jowar grown in the Khariff season.

(*d*) The Central and the State Governments have sanctioned the amount in respect of consolidated dry farming projects as indicated below:—

	1972-73	1973-74
(1) Hadagali project	11.25 lakhs	12 30 lakhs
(2) Dodballapur project	10.34 lakhs	11 25 lakhs
(3) Bijapur project	10.34 lakhs	11.25 lakhs

(*c*) The salient features are:—

in respect of soil conservation and land development works, 25 per cent of the amount would be given as *ex-gratia* and remaining by way of loan.

(ii) Construction of farm ponds :— Full financial assistance would be granted for construction of ponds in the fields.

(iii) Supply of seeds, manure and insecticides:— These would be supplied to ryots at 50 per cent subsidy and remaining 50 per cent would be given as short term loan.

(iv) Demonstration plots: Seeds, fertilisers and plant protection chemicals required for demonstration plots wou d be supplied free of cost.

(v) Training camp will be arranged for officers and ryots partaking in this programme.

(vi) Supply of sprinklers:—These will be supplied to ryots holding less than 10 acres of land at 50 per cent subsidy and the remaining 50 per cent by way of loan. For ryots with more than 10 acres of holdings, these will be supplied at 25 per cent free of cost and the remaining by way of loan.

(vii) Animal Husbandary:—Under this programme, cows, sheep and hens will be supplied to ryots at 1/3 portion of cost as subsidy and remaing by way of loan.

(viii) Under the scheme, 25 per cent of subsidy will be given to ryots for digging wells and installation of pumpsets.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ : ಈ ಪರೀಕ್ಷೆಯಿಂದ ಇಳುವರಿ ಹೆಚ್ಚು ಬರುತ್ತದೆಂದು ಗೊತ್ತಾಗಿದೆ ? ಇತರೆ ರಾಜ್ಯಗಳಲ್ಲಿ ಇಂಥ ಪ್ರಯತ್ನ ಮಾಡಲಾಗಿದೆಯೇ ?

ಶ್ರೀ ಎಸ್. ಎಂ. ಕೃಷ್ಣ : ಎಕ್ಸ್‌ಪೆರಿಮೆಂಟಲ್ ಫಾರಂಮ್ಸ್ ಎಂದು ಕೇಂದ್ರ ಸರ್ಕಾರದವರು ಇದನ್ನು ಮಂಜೂರು ಮಾಡಿದ್ದಾರೆ. ದೊಡ್ಡಬಳ್ಳಾಪುರ, ಬಿಜಾಪುರ ಮತ್ತು ಹಡಗಲಿಗಳಲ್ಲೀ ಸುಮಾರು ಕೇಂದ್ರಗಳಿವೆ. ಅಲ್ಲಿ ಡ್ರೈ ಫಾರ್ಮಿಂಗ್ ವ್ಯವಸಾಯ ನಡೆದು ಒಂದಕ್ಕೆ ಎರಡರಷ್ಟು ಇಳುವರಿ ಬರುವುದು ಎಂದು ಪರೀಕ್ಷಾ ಫಲಿತಾಂಶದಿಂದ ಗೊತ್ತಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :— ಡ್ರೈ ಫಾರ್ಮಿಂಗ್ ವ್ಯವಸಾಯದಲ್ಲಿ ಯಾವ ಪ್ರಮಾಣದಲ್ಲಿ ನೀರಿನ ಅಂಶವಿದೆ ? ಹೊಸ ಪ್ರಯೋಗದಿಂದ ನೀರಿನ ಪ್ರಮಾಣವನ್ನು ಹೆಚ್ಚುಮಾಡ ಬಹುದು ? ಮತ್ತು ಉತ್ಪತ್ತಿ ಎಷ್ಟು ಪ್ರಮಾಣದಲ್ಲಿ ಏರಿದೆ ?

ಶ್ರೀ ಎಸ್. ಎಂ. ಕೃಷ್ಣ :— ಇಲ್ಲಿ ಉತ್ಪತ್ತಿ ಹೆಚ್ಚಿಸುವ ಪ್ರಶ್ನೆಯಿಲ್ಲ. ಇರುವ ನೀರನ್ನು ಸರಿಯಾದ ರೀತಿಯಲ್ಲಿ ಮ್ಯಾನೇಜ್ ಮಾಡುವುದರಿಂದ, ಸ್ಪ್ರಿಂಕಲರ್ಸ್ ಉಪಯೋಗ ಮಾಡುವುದರಿಂದ ಒಳ್ಳೆಯ ಫಲಿತಾಂಶ ಬರುವುದು. ಇಂಡಿಯಾ ಸರ್ಕಾರದವರು ೧೫ ಕೇಂದ್ರಗಳನ್ನು ದೇಶಾದ್ಯಂತ ಸೆಲೆಕ್ಟ್ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ೩ ಕೇಂದ್ರಗಳನ್ನು ಆರಿಸಿದ್ದಾರೆ ದೊಡ್ಡಬಳ್ಳಾಪುರದಲ್ಲಿ ೮ ಸಾವಿರ ಎಕರೆ, ಪ್ರಯೋಗಕ್ಕೆ ನೇಮಕ ಮಾಡಲಾಗಿದೆ, ಬಿಜಾಪುರದಲ್ಲಿ ಮತ್ತು ಹಡಗಲಿಯಲ್ಲಿ ೬–೬ ಸಾವಿರ ಎಕರೆ ಈ ಪ್ರಯೋಗಕ್ಕೆ ನೇಮಕ ಮಾಡಲಾಗಿದೆ. ಇಲ್ಲಿ ೭೨-೭೩ ರಿಂದ ಪ್ರಯೋಗವಾಗುತ್ತಿದೆ. ಈ ಎಕ್ಸ್‌ಪೆರಿಮೆಂಟ್ ೨ ವರ್ಷ ನಡೆಯುವುದು. ಆನಂತರ ಬಂದ ಫಲಿತಾಂಶ ಬಟ್ಟಿ ಇಳಿದು ಎಕ್ಸ್‌ಟೆನ್ಸೀವ್ ಆಗಿ ಡ್ರೈ ಫಾರ್ಮಿಂಗ್ ನಮ್ಮ ರಾಜ್ಯದಲ್ಲಿ ಸಾಕಾದಷ್ಟಾಗಲು ಇದು ಉಪಯೋಗವಾಗುವುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ : ಕಳೆದ ೨ ವರ್ಷಗಳಿಂದ ೩ ಕೇಂದ್ರಗಳಲ್ಲಿ ಈ ಪರೀಕ್ಷಾ ಪ್ರಯೋಗ ಮಾಡಲಾಗಿದೆ ಆ ಫಲಿತಾಂಶ ಇನ್ನೂ ಕಾರ್ಯಗತಮಾಡುವ ಮಟ್ಟಕ್ಕೆ ಬಂದಿಲ್ಲ ಎಂದು ಉತ್ತರ ಕೊಡಲಾಗಿದೆ. ಈ ೨ ವರ್ಷದ ಪರೀಕ್ಷೆ ಸಾಲದೇ ?

ಶ್ರೀ ಎಸ್. ಎಂ. ಕೃಷ್ಣ : ಇದು ೭೨ ರಲ್ಲಿ ಪ್ರಾರಂಭವಾಯಿತು.

ಶ್ರೀ ಟಿ. ಎಂ. ಮಂಜುನಾಥ್ : ಈ ಪ್ರಯೋಗ ಕೇಂದ್ರವನ್ನು ಎಲ್ಲಾ ಜಿಲ್ಲೆಗಳಲ್ಲೂ ಸ್ಥಾಪಿಸುವ ಅಭಿಪ್ರಾಯವಿದೆಯೇ ?

ಶ್ರೀ ಎಸ್. ಎಂ. ಕೃಷ್ಣ : ಇದು ಬಹಳ ಸಾಧುವಾದ ಸಲಹೆ. ಆದರೆ ಕೇಂದ್ರ ಸರಕಾರದವರು ಈ ೩ ಪ್ರಯೋಗ ಕ್ಷೇತ್ರಗಳಿಗೆ ಹಣ ಕೊಟ್ಟಿದ್ದಾರೆ ಹಡಗಲಿಗೆ ೧೧ ಲಕ್ಷ, ದೊಡ್ಡಬಳ್ಳಾಪುರ ಮತ್ತು ಬಿಜಾಪುರಕ್ಕೆ ೧೦–೧೦ ಲಕ್ಷ ೭೨–೭೩ ಕ್ಕೆ ಕೊಟ್ಟಿದ್ದಾರೆ ಹೀಗೆ ೭೩-೭೪ ಕ್ಕೆ ೧೨-೧೦ ಲಕ್ಷ ಹೀಗೆ ಕೊಟ್ಟಿದ್ದಾರೆ. ಆದುದರಿಂದ ಕೇಂದ್ರಸರಕಾರ ಹಣ ಕೊಟ್ಟಂತೆ ನಾವು ಪ್ರಯೋಗ ಕ್ಷೇತ್ರಗಳನ್ನು ವಿಸ್ತರಿಸಬೇಕಾಗುವುದು. ಈಗ ಪ್ರಯೋಗ ನಡೆಸುತ್ತಿರುವುದರಿಂದ ಉಪಯೋಗವಾದರೆ ಮಿಕ್ಕ ಎಲ್ಲಾ ಕಡೆ ಪ್ರಸರಿಸಲು ಅನುಕೂಲವಾಗಬಹುದು ಎಂಬ ನಿರೀಕ್ಷೆ ಇದೆ.

SRI J. P. SARWESH : Sir, is the experiment only in respect of jowar or are there any other crops with which you are experimenting ?

SRI S. M. KRISHNA – We are starting with jowar.

ಶ್ರೀ ಕೆ. ಎಚ್. ಹನುಮೇಗೌಡ : ಈ ಪರೀಕ್ಷೆ ಕೇಂದ್ರವನ್ನು ವ್ಯವಸಾಯದ ಇಲಾಖೆ ನಡೆಸುವುದೇ ಅಥವಾ ಜೇರೆ ಇಲಾಖೆ ನಡೆಸುವುದೇ ?

ಶ್ರೀ ಎಸ್. ಎಂ. ಕೃಷ್ಣ : ವ್ಯವಸಾಯದ ಇಲಾಖೆ ಮಾಡುವುದು. ಜೊತೆಗೆ ವ್ಯವಸಾಯದ ಇಲಾಖೆ ಅಧಿಕಾರಿಗಳು ರೈತರನ್ನು ಕರೆದುಕೊಂಡುಹೋಗಿ ಅವರಿಗೆ ಪರಿಚಯ ಮಾಡಿಕೊಡಲು ಪ್ರಯತ್ನ ಸಹ ಮಾಡುತ್ತಿದ್ದಾರೆ.

ಶ್ರೀ ಎಂ. ಬಿ. ರಾಮಸ್ವಾಮಿ : ಈ ಪ್ರಯೋಗಾಲಯಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ತೆರೆಯಲಂ ಮನಸ್ಸುಮಾಡಲಾಗಿದೆಯೇ ? ಇದರಿಂದ ಕೃಷಿಗೆ ಹೆಚ್ಚಿನ ಅನುಕೂಲವಾಗುತ್ತಿದೆಯೇ ?

ಶ್ರೀ ಎಸ್. ಎಂ. ಕೃಷ್ಣ : ಇದರಿಂದ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ.

ಶ್ರೀ ಎಸ್. ವೈ. ಪಾಟೀಲ್ : ನಾನು ನೋಡಿದ್ದೇನೆ, ಬಿಜಾಪುರ ತಾಲ್ಲೂಕಿನಲ್ಲಿ ಇದು ಯಶಸ್ವಿ ಯಾಗುತ್ತಿದೆ. ಇದನ್ನು ಅತ್ಯಂತ ಬಡ ತಾಲ್ಲೂಕುಗಳಾದ ಇಂಡಿ-ಸಿಂದಗಿಗಳಲ್ಲಿ ಜಾರಿಗೆ ತಂದು ಪ್ರಯೋಗ ಮಾಡಿ ಅನುಕೂಲಮಾಡುವಿರಾ ?

ಶ್ರೀ ಎಸ್. ಎಂ. ಕೃಷ್ಣ : ಇದು ಕೇಂದ್ರ ಸರಕಾರದ ಸ್ಕೀಮಂ. ಆ ಸರಕಾರದ ಪ್ರತಿ ವರ್ಷ ಅಥವ ೨ ವರ್ಷಗಳಿಗೊಂದು ಸಲ ಇದನ್ನೆ ಲ್ಲಾ ರೀಕನ್‌ಸಿಡರ್ ಮಾಡಿ ಅಸೆಸ್ ಮಾಡಿ ಮುಂದಿನ ೫ ವರ್ಷ ಏಷ್ಟು ಮಾಡಬಹುದು ಎಂದು ನಿಗದಿಮಾಡುವುದು. ಕೇಂದ್ರ ಸರಕಾರ ಈ ವರ್ಷ ೭೨ ರಲ್ಲಿ ಮಂಜೂರು ಮಾಡಿರುವುದು ಈ ೩ ಕೇಂದ್ರ. ಜೊತೆಗೆ ಹೆಬ್ಬಾಳದಲ್ಲಿ ಒಂದಿದೆ. ಈ ೪ ಕೇಂದ್ರ ಸರಕಾರ ದಿಂದ ಸ್ಥಾಪನೆಯಾಗಿವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು : ಡ್ರೈ ಫಾರ್ಮಿಂಗ್ ಜೊತೆಗೆ ಬೇಕಾದಷ್ಟು ರಿಸರ್ಚ್ ಆಗುತ್ತಿದೆ ಆನೇಕ ಬಡ ರೈತರಿಗೆ ಬಾವಿ ತೋಡುವಾಗ ಬಹಳ ತೊಂದರೆಯಾಗುತ್ತಿದೆ. ಇದಕ್ಕಾಗಿ ವಾಟರ್ ಟೇಬಲ್ ಮೇಲಿದೆಯೇ ಎಂದು ನೋಡಲು ಆಧುನಿಕ ಉಪಕರಣವಿದೆಯೇ ?

ಶ್ರೀ ಎಸ್. ಎಂ. ಕೃಷ್ಣ : ಭೂಗರ್ಭ ಇಲಾಖೆ ಈಗ ಸರ್ವೆಮಾಡಿ ವಾಟರ್ ಟೇಬಲ್ ರೈತರಿಗೆ ಸಿಕ್ಕುವುದೇ ಎಂದು ನೋಡುತ್ತಿದೆ.

ಶ್ರೀ ಶರಣಪ್ಪ : ಈಗ ಜೋಳದ ಬಗ್ಗೆ ಪ್ರಯೋಗ ನಡೆಯುತ್ತಿದೆ ಎಂದು ಹೇಳಿದೆ ರಾಯಚೂರು ಜಿಲ್ಲೆಯಲ್ಲಿ ಜೋಳ ಮುಖ್ಯವಾಗಿ ಉಪಯೋಗ ಮಾಡುವರು. ಆದುದರಿಂದ ಮುಂದಿನ ಯೋಜನೆಯಲ್ಲಿ ಆ ಜಿಲ್ಲೆಯಲ್ಲಿ ಕೇಂದ್ರವನ್ನು ಪ್ರಾರಂಭಿಸಬೇಕೆಂದು ಕೇಂದ್ರ ಸರಕಾರಕ್ಕೆ ಸೂಚಿಸುವಿರಾ ?

ಶ್ರೀ ಎಸ್. ಎಂ. ಕೃಷ್ಣ : ಪ್ರಧಾನವಾಗಿ ಜೋಳ ಮತ್ತು ಕೆಲವು ಸಮಯದಲ್ಲಿ ರಾಗಿ ಪ್ರಯೋಗ ನಡೆಯುತ್ತಿದೆ, ದೊಡ್ಡಬಳ್ಳಾಪುರದಲ್ಲಿ ರಾಗಿ, ಬಿಜಾಪುರ ಮತ್ತು ಹಡಗಲಿ ಮುಂತಾದ ಕಡೆಗಳಲ್ಲಿ ಜೋಳ ಇವುಗಳ ಬಗ್ಗೆ ಪ್ರಯೋಗ ನಡೆಯುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ — ಜಿಯಲಾಜಿಕಲ್ ಸರ್ವೆಯವರು ವಾಟರ್‌ಪ್ಲೇಟಿನ ಬಗ್ಗೆ ಹೇಳಶಕ್ಯ ಸಂದರ್ಭಗಳು ಅನೇಕ ವೇಳೆ ಘೇಲಾಗಿ, ಅದಕ್ಕಿಂತಲೂ ಹಳ್ಳಿಯಲ್ಲಿರತಕ್ಕ ಆ ಜನರೇ ಈ ವಿಚಾರದಲ್ಲಿ ಬಹಳ ಉತ್ತಮವೆಂಬ ಅಭಿಪ್ರಾಯ ಬರದಿರುವುದರಿಂದ ಸರ್ಕಾರದವರು ಅವರಿಗೇನಾದರೂ ಪ್ರೋತ್ಸಾಹ ನೀಡುವುದಕ್ಕೆ ಒಂದು ಯೋಜನೆಯನ್ನು ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಇದು ಬಹಳ ವಿವಾದಾಂಶವಾದ ವಿಷಯ. ನಮ್ಮ ಹಳ್ಳಿಯಲ್ಲಿ ಒಬ್ಬ ರೈತ ಆ ಹಳ್ಳಿಯ ಜಯಶಿಲ್ಪಿ ಶಾಸ್ತ್ರದವನ ಮಾತನ್ನು ಕೇಳಿ ಹಾಳಾಗಿ ಹೋದ. ಆದುದರಿಂದ ಇದರ ಬಗ್ಗೆ ಏಷ್ಟು ಹಗುರವಾಗಿ ಹೇಳುವುದಕ್ಕೆ ಬರುವುದಿಲ್ಲ

Asterisks indicate that remarks or Speeches have not been revised by the member concerned

ಒಬ್ಬ ಮಾನ್ಯ ಸದಸ್ಯರು.—ಸಾಯಿಲ್ ಟೆಸ್ಟ್ ಮಾಡತಕ್ಕ ಒಂದೊಂದು ಕೇಂದ್ರವನ್ನು ಪ್ರತಿ ತಾಲ್ಲೂಕಿಗೂ ಮಾಡುವುದು ಒಳ್ಳೆಯದು. ಅದಕ್ಕೆ ಅನುಕೂಲ ಮಾಡಲು ಸರ್ಕಾರದವರು ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಇವು ಜಿಲ್ಲಾ ಮಟ್ಟದಲ್ಲಿವೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದಂತೆ ಇದನ್ನು ತಾಲ್ಲೂಕುಗಳಿಗೂ ವಿಸ್ತರಿಸಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ.—ಈ ಯೋಜನೆಯನ್ನು ರೂಪಿಸುವುದರಲ್ಲಿ ಒಂದೊಂದಕ್ಕೆ ಒಂದೊಂದು ಪರ್ಸೆಂಟೇಜ್ ಪ್ರಕಾರ ಹಣವನ್ನು ಒದಗಿಸಲಾಗಿದೆ, ಒಂದಕ್ಕೆ ಶೇ. ೫೦ ರಷ್ಟನ್ನು ಕೊಟ್ಟರೆ, ಇನ್ನೊಂದಕ್ಕೆ ಕೊಡತಕ್ಕ ಸಹಾಯ ಶೇ. ೨೫ರಷ್ಟಿದೆ. ಮತ್ತೊಂದಕ್ಕೆ ಶೇ ೩೩ ಚಿಲ್ಲರೆ ಇದೆ. ಎಲ್ಲಕ್ಕೂ ಒಂದೇ ಸಮನಾಗಿ ಶೇ. ೫೦ ರಂತೆ ಸಹಾಯ ಒದಗಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಸ್. ಎಂ ಕೃಷ್ಣ.—ಇದು ಕೇಂದ್ರ ಸರ್ಕಾರದವರ ಯೋಜನೆಗಳು. ಇದಕ್ಕೆ ಅವರಲ್ಲಿ ಒಂದು ಟೇಬಲ್ಲಿದೆ ಅದರಂತೆ ಅವರು ಸಹಾಯವನ್ನು ಒದಗಿಸುತ್ತಾರೆ. ಅವರು ಹೇಳತಕ್ಕ ಷರತ್ತಿನ ಪ್ರಕಾರ ನಾವು ನಡೆದರೆ ಅವರು ನಮಗೆ ಈ ಸಹಾಯಗಳನ್ನು ಒದಗಿಸುತ್ತಾರೆ. ಅದಕ್ಕೆ ಬದಲಾಗಿ ನಾವು ಅವರಿಗೆ ನಮ್ಮ ಷರತ್ತುಗಳನ್ನು ಹಾಕಿದರೆ ಈ ಸಹಾಯ ನಮಗೆ ಸಿಕ್ಕತಕ್ಕದ್ದು ತಪ್ಪಿ ಹೋಗತಕ್ಕ ಅವಕಾಶವು ಉಂಟು. ಆದುದರಿಂದ ನಾವು ಅವರು ಹೇಳಿದ್ದನ್ನೇ ಅನುಷ್ಠಾನಕ್ಕೆ ತಂದಿರುತ್ತೇವೆ.

MADAM SPEAKER.—Question Number 225, 461 and 513 may be taken up together.

CENTRAL ASSISTANCE FOR RELIEF WORK

225. SRI T. R. SHAMANNA (Fort).—

Will the Minister for Revenue be pleased to state :—

(*a*) the total amount of money spent for drought relief in 1972-73 district-wise ;

(*b*) the total amount of Central Assistance got ;

(*c*) the details of the nature of relief given ?

SRI N. HUTCHAMASTHY GOWDA (Minister for Revenue).—

(*a*) A statement showing the expenditure under '64 Famine Relief' incurred district-wise is appended.

(*b*) The Study Team deputed by Government of India toured the State in September and fixed ceiling of Rs. 775.00 lakhs on drought relief expenditure upto 31st December 1972 for Central Assistance as follows :

	(Rs. in lakhs)
(i) Relief Works	625
(ii) Drinking Water	25
(iii) Subsidy for purchase of fodder and food	25
Total Relief Items :	675
(v) Taccavi Loan	100
Grand Total :	775